## ವಾರ್ತಾ ವಿಶ್ಲೇಷಣೆ

### ರಾಜಕೀಯದ ಸಂತೆಯಲ್ಲಿ ನಡೆದಾಡಿದ ಸಂತ

'ತ್ಯಾಗ ಮತ್ತು ಸೇವೆಗಳೇ ನಮ್ಮ ರಾಷ್ಟ್ರೀಯ ಆದರ್ಶಗಳು.' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಈ ಹೇಳಿಕೆಯ ಅರ್ಥವನ್ನು ತಿಳಿಯಲು ನಾವು ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರ ಅದ್ಭುತ ವ್ಯಕ್ತಿತ್ವವನ್ನು ಅವಲೋಕಿಸಿದರೆ ಸಾಕು. ಇಂತಹ ಮಹಾನ್ ವ್ಯಕ್ತಿಗಳಿರುವುದರಿಂದಲೇ ಭಾರತ ಇನ್ನೂ ಉಳಿದಿರುವುದು. ರಾಷ್ಟ್ರೀಯ ಹಿತಚಿಂತನೆ ಹಾಗೂ ನಿರಹಂಕಾರಗಳ ಮೂರ್ತಿರೂಪವಾಗಿರುವ ಕಲಾಂ ಯುವಜನತೆಗೆ ನಿತ್ಯಸ್ಫೂರ್ತಿಯಾಗಿದ್ದಾರೆ. ಬಡ ಕುಟುಂಬದಲ್ಲಿ ಜನಿಸಿದ್ದರೂ ಸ್ವಂತ ಶ್ರಮದಿಂದ, ಆತ್ಮವಿಶ್ವಾಸದಿಂದ ಮೇಲೇರುತ್ತ ರಾಷ್ಟ್ರದ ಅತ್ಯುತ್ತಮ ಹುದ್ದೆಯನ್ನು ಅಲಂಕರಿಸಿ, ತಮ್ಮ ಘನವಾದ ವ್ಯಕ್ತಿತ್ವದಿಂದ ಆ ಹುದ್ದೆಗೇ ಗೌರವ ತಂದರು ಕಲಾಂ. ರಾಷ್ಟ್ರಪತಿ ಹುದ್ದೆಯನ್ನು ಬಿಟ್ಟುಕೊಟ್ಟ ನಂತರವೂ ಇವರು ಯುವಜನತೆಯೊಂದಿಗೆ ಸಂಪರ್ಕವಿರಿಸಿಕೊಂಡು ದೇಶದ ಅಭಿವೃದ್ಧಿಗಾಗಿ ಶ್ರಮಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಇವರ ಕುರಿತು ದಿನಪತ್ರಿಕೆಗಳಲ್ಲಿ ಹಾಗು ನಿಯತಕಾಲಿಕೆಗಳಲ್ಲಿ ಬಹಳಷ್ಟು ಮಾಹಿತಿ ಹೊರಬಂದಿದೆ. ಜುಲೈ ೨೬ ರ 'ವಿಜಯ ಕರ್ನಾಟಕ' ದಲ್ಲಿ ಕಲಾಂ ಅವರ ಬಗ್ಗೆ ನೀಡಿದ್ದ ವಿವರ ಅವರಲ್ಲಿರುವ ಗಮನಾರ್ಹ ಗುಣಗಳನ್ನು ಪರಿಚಯಿಸುತ್ತದೆ.



ಇಡೀ ದಿನ ಕೆಲಸದಲ್ಲಿ ನಿರತರಾಗಿರುತ್ತಿದ್ದ ಕಲಾಂ ಮಧ್ಯರಾತ್ರಿಯ ನಂತರವೇ ರಾತ್ರಿಯ ಭೋಜನವನ್ನು ಮಾಡುತ್ತಿದ್ದರಂತೆ. ತಮಗಾಗಿ ಯಾವುದೇ ವಿಶೇಷ ಅಡಿಗೆಯನ್ನು ಅವರು ಮಾಡಿಸಿಕೊಂಡವರಲ್ಲ. ಹಾಗೂ ರಾಷ್ಟ್ರಪತಿಗಳ ವಿಶೇಷ ಕೌಟುಂಬಿಕ ಅಡುಗೆ ಮನೆಯ ಬದಲಿಗೆ ರಾಷ್ಟ್ರಪತಿ ಭವನದ ಎಲ್ಲ ಸಿಬ್ಬಂದಿಗೆಂದು ತಯಾರಾಗುವ ಊಟವನ್ನೇ ಸಂತೋಷವಾಗಿ ಸ್ವೀಕರಿಸುತ್ತಿದ್ದರಂತೆ. ಅವರ ಅಡಿಗೆ ಹಾಗೂ ಸೇವೆಗಾಗಿ ನೇಮಿಸಿದ ಐವತ್ತು ಜನ ಸಿಬ್ಬಂದಿ ಇವರ ಬರವಿಗಾಗಿ ಕಾಯುತ್ತ ಅಲ್ಲಿ ಇರಬೇಕಿರಲಿಲ್ಲ. ಒಬ್ಬನೇ ಒಬ್ಬ ಊಟವನ್ನು ಬಿಸಿ ಮಾಡಿ ಬಡಿಸಿದರೆ ಸಾಕಿತ್ತು. ಅತ್ಯಂತ ಸರಳ ಸಸ್ಯಾಹಾರ ಭೋಜನವನ್ನೇ ಅವರು ಇಷ್ಟಪಡುತ್ತಿದ್ದರು.

ಪ್ರೊ. ಕಲಾಂ ನಿವೃತ್ತರಾಗುವವರೆಗೂ ರಾಷ್ಟ್ರಪತಿಗೆಂದೇ ಮೀಸಲಿರುವ ಅಡುಗೆಮನೆಯಲ್ಲಿ ಒಂದು ದಿನವೂ ಅಡುಗೆ ಕೆಲಸ ನಡೆದಿಲ್ಲ. ಜಿಹ್ವಾಚಾಪಲ್ಯವನ್ನು ಗೆದ್ದ ಈತ ಮಹಾನ್ ವ್ಯಕ್ತಿಯೇ ಸರಿ. ಮತ್ತೂ ಆಶ್ಚರ್ಯಕರ ಸಂಗತಿಯೆಂದರೆ ತಮ್ಮ ಸಂಬಂಧಿಗಳು ಬಂದಾಗಲೂ ಅವರಿಗೆ ಅದೇ ಸರಳ ಊಟವನ್ನು ಮಾಡಿಸಿದರು ಹಾಗೂ ಅವರಿಗೆ ನೀಡಿದ ಆತಿಥ್ಯಕ್ಕೆ ತಗುಲಿದ ವೆಚ್ಚವನ್ನು ತಮ್ಮ ಸ್ವಂತ ಹಣದಿಂದ ಮರು ಪಾವತಿ ಮಾಡಿದರು. ದೇಶದ ಬಡಜನರು ನೀಡುವ ಕಂದಾಯದಿಂದ ತಮ್ಮ ಜೀವನವನ್ನು ವಿಲಾಸಮಯ ಮಾಡಿಕೊಳ್ಳದೆ ಉತ್ತಮ ಮೌಲ್ಯವನ್ನು ತೋರಿದ್ದಾರೆ. ವಿ.ವಿ.ಗಿರಿ ಹಾಗೂ ಇನ್ನೂ ಅನೇಕ ರಾಷ್ಟ್ರಪತಿಗಳ ನಡತೆಯೊಂದಿಗೆ ಇವರನ್ನು ಹೋಲಿಸಿದಾಗ ಕಲಾಂರ ಪಾರದರ್ಶಕ ಜೀವನ ಬೆರಗು ಮೂಡಿಸುತ್ತದೆ.

ಪ್ರೊ. ಕಲಾಂ ಅವರ ಸರಳ ವ್ಯಕ್ತಿತ್ವಕ್ಕೆ ಮಾರುಹೋದ ಅವರ ಕಾರ್ಯದರ್ಶಿ ಶ್ರೀ ಪಿ.ಎಂ. ನಾಯರ್ ಅವರು ತಮ್ಮ ಅನುಭವವೊಂದನ್ನು ಹೇಳಿಕೊಂಡಿದ್ದಾರೆ. ಒಮ್ಮೆ ಅವರಿಗೆ ಕಲಾಂ ಫೋನ್ ಮಾಡಿ, "ನನ್ನ ಕೋಣೆಯಲ್ಲಿ ನೀರು ಸೋರುತ್ತಿದೆ, ಆದ್ದರಿಂದ ರಾತ್ರಿಯಿಡೀ ನಾನು ನಿದ್ದೆ ಮಾಡಲು ಆಗಲಿಲ್ಲ" ಎಂದರಂತೆ. ಬೇರೆ ಯಾರಾದರೂ ರಾಷ್ಟ್ರಪತಿ ಆಗಿದ್ದರೆ ಶಿಕ್ಷೆ ಆಗುತ್ತಿದ್ದುದು ಖಂಡಿತ. ಆದರೆ ಕಲಾಂ ತಮ್ಮ ಕಾರ್ಯದರ್ಶಿಯನ್ನೇ ಸಾಂತ್ವನಪಡಿಸುವ ದನಿಯುಲ್ಲಿ "ಯೋಚನೆ ಮಾಡಬೇಡಿ. ನೀವು ಕೂಡಲೇ ಅದನ್ನು ರಿಪೇರಿ ಮಾಡಿಸುತ್ತೀರೆಂಬ ವಿಶ್ವಾಸ ನನಗಿದೆ. ಆದರೆ, ರಾಷ್ಟ್ರಪತಿ ಭವನದ ಉಳಿದ ಸಿಬ್ಬಂದಿಯ ಮನೆಗಳ ಬಗ್ಗೆ ನನಗೆ ಯೋಚನೆಯಾಗುತ್ತಿದೆ. ಅವರ ಮನೆಗಳು ಸೋರಿದರೆ, ಉಳಿಯಲು ಅವರಿಗೆ ಬೇರೆ ಕೋಣೆಯೇ ಇರುವುದಿಲ್ಲವಲ್ಲ ಎಂದು ವ್ಯಥೆಯಾಗುತ್ತಿದೆ" ಎಂದರಂತೆ.

ಪ್ರೊ. ಕಲಾಂ ಅವರು ರಾಷ್ಟ್ರಪತಿ ಭವನದಿಂದ ತೆರಳುವಾಗ, ತಾವು ಬಂದಾಗ ತಂದಿದ್ದ ಎರಡು ಸೂಟ್‌ಕೇಸ್‌ಗಳನ್ನಷ್ಟೇ ವಾಪಸು ತೆಗೆದುಕೊಂಡು ಹೋದರು. ಹಾಗೆ ಮಾಡಿದ ಏಕೈಕ ರಾಷ್ಟ್ರಪತಿ ಅವರು ಎಂದು ಕಾಣುತ್ತದೆ. ತಮ್ಮಲ್ಲಿರುವ ಜ್ಞಾನದ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಂಡು, ಜೀವನದಲ್ಲಿ ಉತ್ತಮ ವಿಚಾರಗಳನ್ನು ಅನುಷ್ಠಾನಕ್ಕೆ ತಂದಿರುವ ಇವರು ತಮಗೆ ಸ್ಫೂರ್ತಿ ನೀಡಿದ ಗ್ರಂಥಗಳನ್ನೇ ನಿಧಿಯೆಂದು ಭಾವಿಸುತ್ತಾರೆ. ಆ ಪುಸ್ತಕಗಳೇ ಇವರ ಆಸ್ತಿಯಂತೆ. ಅವನ್ನು ಮಾತ್ರ ತೆಗೆದುಕೊಂಡು, ತಮಗೆ ಬಂದಿದ್ದ ಎಲ್ಲಾ ಉಡುಗೊರೆಗಳನ್ನೂ ಅಲ್ಲೇ ಬಿಟ್ಟು ನಡೆದರು.

ಕೆಲವು ವರ್ಷಗಳ ಬಳಿಕ ನಮ್ಮ ಮಕ್ಕಳು ಅಚ್ಚರಿಯಿಂದ ಇಂಥದೊಂದು ಪ್ರಶ್ನೆ ಕೇಳಬಹುದು: " ಅಂಥವರೊಬ್ಬರು ಈ ದೇಶದಲ್ಲಿ ನಿಜವಾಗಿಯೂ ಇದ್ದರೇ?" ಇಂಥ ಋಷಿಸದೃಶ ವ್ಯಕ್ತಿಗೆ, ಜ್ಞಾನಿ–ವಿದ್ವಾಂಸ–ಮನೀಷಿ–ದಾರ್ಶನಿಕ ಎಲ್ಲವೂ ಆಗಿದ್ದು, ರಾಜಕೀಯದ ಸಂತೆಯಲ್ಲಿ ನಡೆದಾಡಿದ ಸಂತನಿಗೆ, ಇದೋ ನಮ್ಮ ನಮನ.